

ಗುಡಿಸ್ಲಾಗೆ ನಾನೂ ನನ್ನ ಮಗ ಇದ್ದೀವಿ'

'ಏನ್ ಕೆಲಸ ಮಾಡ್ತೀರಿ?'

'ನಾಲ್ಕಾರು ಹಂದಿ ಸಾಕಿದ್ದೀನಿ, ಜೊತೆಗೆ ಕತ್ತಾಳೆ ನಾರಿನಾಗೆ ಹಗ್ಗ ಹೊಸೆದು ಸಂತೆಗೆ ಮಾರ್ತೀನಿ' ಅವರ ಮಾತಿನಲ್ಲಿ ಪ್ರಖರವಾದ ಆತ್ಮವಿಶ್ವಾಸವಿತ್ತು.

ನಮ್ಮ ತಂದೆ ಅವರೊಂದಿಗಿನ ಮಾತನ್ನು ಹೆಚ್ಚು ಮುಂದುವರಿಸದೆ, 'ಆಯಿತು ನಾಳೆ ಬೆಳಗ್ಗೆ ನಾನು ಸ್ಕೂಲಿಗೆ ಹೋಗುವುದೊರಳಗಾಗಿ ಬಂದು ಕಾಯಿಗಳನ್ನು ಕಿತ್ತುಕೊಡಿ' ಎಂದು ಹೇಳಿದರು.

ಅವರು ತಲೆಯಾಡಿಸಿ 'ಆಯಿತು ಬುದ್ದಿ' ಎಂದು ಹೇಳಿಹೋದರು.

* * *

ಹೊಸ ಊರಿನ ಸರ್ಕಾರಿ ಶಾಲೆಯಲ್ಲಿ ನಾನು ಏಳನೇ ತರಗತಿಗೆ ಸೇರಿದೆ. ಸ್ವಲ್ಪ ದಿನ ಕಳೆದಮೇಲೆ ನಿಧಾನವಾಗಿ ನನಗೆ ಶಾಲೆ ಮತ್ತು ನನ್ನ ತರಗತಿಯ ಪರಿಚಯವಾಗತೊಡಗಿತು. ನನಗೆ ಹೆಚ್ಚು